


ಆರ್.ಕೆ. ಪದ್ಮನಾಭ ಅವರ ಗಾನ ಮಾಧುರ್ಯ

ಹಾಡುವುದಿಲ್ಲ' ಎನ್ನುವಂತೆ ಹಾಡುಗಾರರು ನಾರೇಯಣರನ್ನು ನೆನೆದು ನಾದಸೇವೆ ಒಪ್ಪಿಸುತ್ತಾರೆ. ಮನುಷ್ಯಮಾತ್ರರ ಮಾತಿರಲಿ – ಕೈವಾರದ ಪರಿಸರದಲ್ಲಿ ಸುಳಿದಾಡಿದರೆ, ಅಲ್ಲಿನ ಮರಗಿಡಗಳಲ್ಲಿ ಹಾಗೂ ಬೆಟ್ಟದ ಕಲ್ಲುಮಣ್ಣಿನಲ್ಲೂ ಸಂಗೀತದ ಸ್ವರಗಳು ಪಿಸುಗುಡುವ ಅನುಭವವಾಗುತ್ತದೆ.

## ಶ್ರೀಸಾಮಾನ್ಯರೊಂದಿಗೆ ಖ್ಯಾತನಾಮರು

ಕದ್ರಿ ಗೋಪಾಲನಾಥರ ಸ್ಯಾಕ್ಸೋಫೋನ್, ಪ್ರಿಯಾ ಸಹೋದರಿಯರ ಯುಗಳಗಾಯನ, ರಾಜು–ನಾಗಮಣಿ ಅವರ ಮ್ಯಾಂಡೊಲಿನ್, ಮೈಸೂರು ಮಂಜುನಾಥ್–ನಾಗರಾಜ್‌ರ ಪಿಟೀಲು, ದೊರೈ ಭಾರತೀದಾಸನ್ – ಕಾರ್ತಿಕೇಯನ್ – ವಿಳಯರಾಜ ಅವರ ನಾದಸ್ವರ, ಓ.ಎಸ್. ಅರುಣ್ ಗಾಯನ – ಹೀಗೆ ಈ ಬಾರಿಯ ಉತ್ಸವದ ವಿಶೇಷಗಳ ಪಟ್ಟಿ ಮುಂದುವರೆಯುತ್ತದೆ.

ತಾತಯ್ಯನವರ ಸನ್ನಿಧಿಯಲ್ಲಿರುವ 'ನಾದ ಸುಧಾರಸ' ವೇದಿಕೆ ಪ್ರತಿನಿತ್ಯದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತೆರೆದುಕೊಂಡಿದೆ. ಅಲ್ಲಿನ ಇಡೀ ಪರಿಸರವೇ ಸಾಂಸ್ಕೃತಿಕ ಚಟುವಟಿಕೆಗಳ ಪ್ರಯೋಗಶಾಲೆಯಾಗಿ ರೂಪುಗೊಂಡಿರುವಂತೆ ಕಾಣಿಸುತ್ತದೆ. ನಗರ–ಪಟ್ಟಣಗಳಿಗೆ ಸೀಮಿತವಾದ ಖ್ಯಾತನಾಮರ ಸಂಗೀತವನ್ನು ಗ್ರಾಮೀಣರೂ ಸವಿಯುವ ಅಪರೂಪದ ಸಂದರ್ಭ ಕೈವಾರದಲ್ಲಿ ಕಾಣಬಹುದು.

### ಕೈವಾರದ ದಾರಿ

ಬೆಂಗಳೂರಿನಿಂದ ಕೈವಾರಕ್ಕೆ ಸುಮಾರು 65 ಕಿ.ಮೀ. ದೂರದ ಹಾದಿ. ಚಿಂತಾಮಣಿ ಹತ್ತಿರದ ತಾಲ್ಲೂಕು ಕೇಂದ್ರ. ಸರ್ಕಾರಿ ಬಸ್ಸುಗಳಿವೆ. ಉಚಿತ ವಸತಿ, ಪ್ರಸಾದದ ವ್ಯವಸ್ಥೆ ಮಠದಲ್ಲಿದೆ.

ಕೈವಾರದ ತಾತಯ್ಯನ ಮಂದಿರದಿಂದ 3 ಕಿ.ಮೀ. ದೂರದಲ್ಲಿ ಒಂದು ಗವಿಯಿದೆ. ಅಲ್ಲಿ ತಾತಯ್ಯನವರು ಧ್ಯಾನ ಮಾಡುತ್ತಿದ್ದರು ಎನ್ನುವುದು ಪ್ರತೀತಿ. ಧ್ಯಾನದ ಸಮಯದಲ್ಲಿ ಒಂದು ಹುಲಿ ಮತ್ತು ಚಿರತೆ ತಾತಯ್ಯನವರ ರಕ್ಷಣೆಗೆ ಕಾವಲು ನಿಲ್ಲುತ್ತಿದ್ದವು ಎನ್ನುವುದು ನಂಬಿಕೆ. ಭೀಮ ಮತ್ತು ಬಕಾಸುರರ ಕಾಳಗ ನಡೆಯಿತು ಎನ್ನುವ ಸ್ಥಳವನ್ನು ಬೆಟ್ಟದ ಜೊತೆ ತಳುಕು ಹಾಕಲಾಗಿದೆ. ಅರಣ್ಯ ಇಲಾಖೆ ರೂಪಿಸಿರುವ ಸುಂದರ ಉದ್ಯಾನವೊಂದು ಕೈವಾರ ಗ್ರಾಮಕ್ಕೆ ಸಮೀಪದಲ್ಲಿದೆ.

ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡುಗಳ ಭಂಡರಿ ಭಜನೆ ತಂಡಗಳು ಸಂಗೀತೋತ್ಸವ ಸಂದರ್ಭದಲ್ಲಿ ಕೈವಾರ ಮಠವನ್ನು ಆವರಿಸುತ್ತವೆ. ಹಗಲು ರಾತ್ರಿಯ ಪರಿವೆ ಇಲ್ಲದೆ ಭಕ್ತಿ ಪರವಶತೆಯಿಂದ ಪದಗಳನ್ನು ಹಾಡುವುದನ್ನು ನೋಡುವುದೊಂದು ಅಪೂರ್ವ ಅನುಭವ.

ಸಂಗೀತ ರಸಿಕರ ಪಾಲಿಗೆ ಮಾತ್ರವಲ್ಲದೆ ಜನಸಾಮಾನ್ಯರ ಪಾಲಿಗೂ ತಾತಯ್ಯನ ಕ್ಷೇತ್ರ ನೆಮ್ಮದಿ ನೀಡುವ ತಾಣ. ಕೈವಾರದ ಗುಡ್ಡದಲ್ಲಿ ರೂಪಿಸಿರುವ ಉದ್ಯಾನದಲ್ಲಿ ಅಡ್ಡಾಡುತ್ತ, ಅಲ್ಲಿನ ಶಿಲಾಫಲಕಗಳ ಮೇಲೆ ಲೇಖಿಸಿರುವ ನಾರೇಯಣರ ಒಗಟಿನ ರೂಪದ ರಚನೆಗಳನ್ನು ಓದುತ್ತ, ಅವುಗಳ ಅರ್ಥಸಾಧ್ಯತೆಗಳನ್ನು ಬಗೆಯುವವರನ್ನು ನೋಡಿದರೆ, ಕೈವಾರ ಕ್ಷೇತ್ರ ಜನಸಾಮಾನ್ಯರ ಆಧ್ಯಾತ್ಮಿಕ ಹಂಬಲವನ್ನು ಪೂರೈಸುವ ರೂಪವಾಗಿರುವುದನ್ನೂ ಗುರ್ತಿಸಬಹುದು.

## ಸಮನ್ವಯದ ಮಾದರಿ

ದೇಶ–ಭಾಷೆ–ಧರ್ಮಗಳನ್ನು ಮೀರಿ ಮನಸ್ಸುಗಳನ್ನು ಬೆಸೆಯುವ, ಸಾಂಸ್ಕೃತಿಕ ಸಂಗತಿಗಳ ಮೂಲಕ ಸಮಾನತೆ–ಸಮನ್ವಯತೆಯ ಮಾದರಿಗಳನ್ನು ಮುಂದಿಡುವ ನಿಟ್ಟಿನಲ್ಲಿ ನಾರೇಯಣರ ಕೈವಾರ ಕ್ಷೇತ್ರ ನೀಡುತ್ತಿರುವ ಕೊಡುಗೆ ದೊಡ್ಡದು. ಬಹುತೇಕ ಧಾರ್ಮಿಕ ಕ್ಷೇತ್ರಗಳು ಒಂದು ಸಮುದಾಯದ ಇಲ್ಲವೇ ಒಂದು ಧರ್ಮದ ಶ್ರದ್ಧಾಕೇಂದ್ರಗಳಾಗಿ ರೂಪುಗೊಂಡಿರುವ ಸಂದರ್ಭದಲ್ಲಿ, ಕೈವಾರ ತನ್ನಲ್ಲಿನ ಕಲಾ ಮತ್ತು ಆಧ್ಯಾತ್ಮಿಕ ಪರಿಸರದ ಮೂಲಕ ಎಲ್ಲ ವರ್ಗದ ಜನರನ್ನು ಸೆಳೆಯುತ್ತಿದೆ; ಸಂಗೀತದ ಮೂಲಕ ಸಹೃದಯರ ಮನಸ್ಸುಗಳನ್ನು ಬೆಸೆಯುವ ಕಾರ್ಯ ನಿರ್ವಹಿಸುತ್ತಿದೆ. ಕರ್ನಾಟಕದ ಕೈವಾರ ಎಲ್ಲ ಅರ್ಥದಲ್ಲೂ 'ಬಹುತ್ವ ಭಾರತ'ದ ಕೊರಳಿನ ಕಂಠೀಹಾರ.